# ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ನಂ.ಕವಿ/ಸಿ.ಡಿ.ಸಿ (ಸಂಯೋಜನೆ)/2022-23/ 6021 ದಿನಾಂಕ: 28.04.2022

## ಅಧಿಸೂಚನೆ

ವಿಷಯ : 2022-23ನೇ ಶೈಕ್ಷಣಿಕ ವರ್ಷಕ್ಕಾಗಿ ಹೊಸ ಕಾಲೇಜು ಹಾಗೂ ಸ್ನಾತಕೋತ್ತರ ಕೋರ್ಸ, ಈಗ ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳ ಮುಂದುವರಿಕೆ/ವಿಸ್ತರಣೆ/ಹೊಸ ಕೋರ್ಸ/ ಶಾಶ್ವತ ಸಂಯೋಜನೆಗಾಗಿ ಅರ್ಜಿಗಳನ್ನು ಅಹ್ವಾನಿಸುವ ಕುರಿತು.

2022-23 ನೇ ಶೈಕ್ಷಣಿಕ ಸಾಲಿಗಾಗಿ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಧಾರವಾಡ, ಗದಗ, ಹಾವೇರಿ ಹಾಗೂ ಕಾರವಾರ ಜಿಲ್ಲೆಗಳಲ್ಲಿಯ ನೋಂದಾಯಿತ ಸಂಘ ಅಥವಾ ನೋಂದಾಯಿತ ಸಾರ್ವಜನಿಕ (ಟ್ರಸ್ಟ)ಗಳಿಂದ ಸ್ಥಾಪಿಸಲ್ಪಡುವ ಹೊಸ ಮಹಾವಿದ್ಯಾಲಯ ಹಾಗೂ ಸ್ನಾತಕೋತ್ತರ ಕೋರ್ಸ, ಪ್ರಸ್ತುತ ಅಸ್ಥಿತ್ವದಲ್ಲಿರುವ ಮಹಾವಿದ್ಯಾಲಯಗಳಲ್ಲಿ ಕೋರ್ಸಗಳ ಮುಂದುವರಿಕೆ/ವಿಸ್ತರಣೆ/ಹೊಸ ಕೋರ್ಸ/ಶಾಶ್ವತ ಸಂಯೋಜನೆ/ಶಾಶ್ವತ ಸಂಯೋಜನೆ ಮುಂದುವರಿಕೆ/ವಿದ್ಯಾರ್ಥಿಗಳ ಪ್ರಮಾಣ ಹೆಚ್ಚಳ ಕುರಿತು ಈ ಕೆಳಗಿನ ಕೋರ್ಸಗಳಿಗೆ ನಿಗದಿತ ನಮೂನೆಯಲ್ಲಿ ಸಂಯೋಜನೆ ಶುಲ್ಕದೊಂದಿಗೆ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

**ವಿಶೇಷ ಸೂಚನೆ:**

i) ಸ್ನಾತಕೋತ್ತರ ಕೋರ್ಸಗಳನ್ನು ಪ್ರಾರಂಭಿಸುವ ಮಹಾವಿದ್ಯಾಲಯಗಳು ಕರ್ನಾಟಕ ವಿಶ್ವವಿದ್ಯಾಲಯದಿಂದ ಶಾಶ್ವತ ಸಂಯೋಜನೆ ಹೊಂದಿರಬೇಕು, ಅಥವಾ 5 ವರ್ಷಗಳ ವರೆಗೆ ಸತತವಾಗಿ ಮುಂದುವರಿಕೆ ಸಂಯೋಜನೆ ಹೊಂದಿರಬೇಕು. ii) ಎಂ.ಬಿ.ಎ/ಎಂ.ಸಿ.ಎ/ ಎಂ.ಎಡ್/ ಎಂಪಿ.ಎಡ್ ಈ ಕೋರ್ಸಗಳನ್ನು ಪ್ರಾರಂಭಿಸುವವರು ಎ.ಐ.ಸಿ.ಟಿ.ಇ/ ಎನ್.ಸಿ.ಟಿ.ಇ ಯಿಂದ ಮಾನ್ಯತೆ ಪಡೆದಿರಬೇಕು. (ಎನ್.ಸಿ.ಟಿ.ಇ ಯಿಂದ ಎಂ.ಎಡ್/ಎಂ.ಪಿ.ಎಡ್ ಕೋರ್ಸಗಳಿಗೆ ಮಾನ್ಯತೆ ಹಾಗೂ ಎಂ.ಬಿ.ಎ/ಎಂ.ಸಿ.ಎ ಕೋರ್ಸಗಳಿಗೆ ಎ.ಐ.ಸಿ.ಟಿ.ಇ ಯಿಂದ ಮಂಜೂರಾತಿ ಪಡೆದುಕೊಂಡಿರಬೇಕು) ಈ ಕೋರ್ಸಗಳಿಗೆ ಮೇಲ್ಕಾಣಿಸಿದ ನಂ.(i)ರಲ್ಲಿ ತಿಳಿಸಿರುವ ಷರತ್ತು ಅನ್ವಯಿಸುವದಿಲ್ಲ. iii) ಹೊಸ ಸ್ನಾತಕೋತ್ತರ ಕೋರ್ಸಗಳನ್ನು ಪ್ರಾರಂಭಿಸುವ ಮಹಾವಿದ್ಯಾಲಯಗಳು ಸಂಬಂಧಿಸಿದ ಪದವಿ ಕೋರ್ಸಗಳ ಸಂಯೋಜನೆಯನ್ನು ಕನಿಷ್ಠ 5 ವರ್ಷ ಹೊಂದಿರಬೇಕು. ಅಲ್ಲದೇ ಪದವಿ ಮಹಾವಿದ್ಯಾಲಯ ಇದ್ದ ಸ್ಥಳದಲ್ಲಿಯೇ ಸ್ನಾತಕೋತ್ತರ ಕೋರ್ಸಗಳನ್ನು ಪ್ರಾರಂಭಿಸಬೇಕು.

ii) ಕರ್ನಾಟಕ ರಾಜ್ಯ ಸರ್ಕಾರದ ಸುತ್ತೋಲೆ ದಿನಾಂಕ:18/02/2022 ರನ್ವಯ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿನ ಹೊಸ ಕಾಲೇಜುಗಳು ಈಗಾಗಲೇ ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳು ತಮ್ಮ ಜಮೀನಿನ ಕುರಿತು ಕೆಳಗಿನಂತೆ ಮಾನದಂಡಗಳನ್ನು ಅನುಸರಿಸಲು ಸೂಚಿಸಿದೆ.

- **a) Not less than 0.5 acres if it is located in the mega cities.**
- **b) 1 acre it is located in BMRDA, City Corporation and district head quarters.**
- **c) 1.5 acres if it is located in Munciplilties or taluk head quarters.**
- **d) 3 acres if it is any other rural areas.**

ಮಹಾವಿದ್ಯಾಲಯಕ್ಕೆ ಸಂಬಂಧಿಸಿದಂತೆ ಮೇಲ್ಕಾಣಿಸಿದ ಜಮೀನಿನ ಕುರಿತು ಪಹಣಿ ಅಥವಾ ಮುನ್ಸಿಪಾಲಟಿ/ಕಾರ್ಪೋರೇಶನಗಳಿಂದ ಪಡೆದ ಇತ್ತೀಚಿನ ಖಾತಾ ನಕಲು ಅಥವಾ ಸದರ ಜಮೀನಿನನ್ನು ಸಂಸ್ಥೆಯ/ ಕಾಲೇಜಿನ ಹೆಸರಿಗೆ ಪಡೆದುಕೊಂಡಿರುವ ಬಗ್ಗೆ ಸಬ್ ರಜಿಸ್ಟ್ರರ್ ಕಚೇರಿಯಲ್ಲಿ ನೊಂದಾಯಿತ ಆಗಿರುವ ಕ್ರಯ ಪತ್ರ ಅಥವಾ 30 ವರ್ಷಗಳಿಂದ ಕಡಿಮೆ ಇಲ್ಲದ ಅವಧಿಯ ಲೀಜ್ ಡೀಡ್ ಅಥವಾ ದಾನಪತ್ರದ ನಕಲು ಪ್ರತಿಗಳನ್ನು ಹಾಜರಪಡಿಸುವುದು.

**ಪದವಿ ಕೋರ್ಸಗಳು :**

ಅ) ಕಲಾ/ವಿಜ್ಞಾನ/ವಾಣಿಜ್ಯ/ಬಿ.ವ್ಹಿ.ಎ/ಬಿ.ಮ್ಯೂಜಿಕ್/ಹೋಮ್‌ಸೈನ್ಸ/ಬಿ.ಎಸ್.ಡಬ್ಲೂ ಸೆಮಿಸ್ಟರ

ಆ) ಬಿ.ಸಿ.ಎ/ಬಿಕಾಂ(ಸಿ.ಎಸ್)/ಬಿ.ಬಿ.ಎ/ಬಿ.ಎಸ್.ಸಿ(ಕಂಪ್ಯೂಟರ ಸೈನ್ಸ)/ಬಿ.ಬಿ.ಎ/ಬಿ.ಟಿ.ಎ (ಬ್ಯಾಚುಲರ್ ಆಫ್ ಟೂರಿಸಂ ಆಡ್ಮಿನಿಸ್ಟ್ರೇಶನ್), (ಹಳೆಯ ವಿದ್ಯಾರ್ಥಿಗಳ ಮುಂದುವರಿಕೆ ಮಾತ್ರ)/ಬಿ.ಟಿ.ಟಿ.ಎಂ. ನಾಲ್ಕು ವರ್ಷದ ಪದವಿ ಕೋರ್ಸ/ಬಿ.ಎ.ಎಸ್.ಎಲ್.ಪಿ (ಬ್ಯಾಚ್ಯೂಲರ್ ಆಫ್ ಆಡಿಯಾಲಜಿ ಮತ್ತು ಸ್ಪೀಚ್ ಲ್ಯಾಂಗ್‌ವೇಜ ಪೆಥಾಲಜಿ) ಬಿ.ಎ.ಎಸ್.ಎಲ್.ಪಿ ಕೋರ್ಸಿಗೆ Rehabilitation Council of India (RCI) ದಿಂದ ಮಾನ್ಯತೆ ಪಡೆದಿರಬೇಕು.

ಇ) ಹೊಸ ಬಿ.ಎಡ್ ಮತ್ತು ಹೊಸ ಬಿ.ಪಿ.ಎಡ್ ಕೋರ್ಸಗಳಿಗೆ ಅರ್ಜಿ ಸಲ್ಲಿಸುವವರು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ದ ಪ್ರಕರಣ 59(13) ರ ಪ್ರಕಾರ ಎನ್.ಸಿ.ಟಿ.ಇ ಯಿಂದ ಮಾನ್ಯತೆ ಪಡೆಯುವುದು ಕಡ್ಡಾಯ.

**ಹೊಸ ಸ್ನಾತಕೋತ್ತರ ಕೋರ್ಸಗಳು ಹಾಗೂ ಈಗಾಗಲೇ ಪ್ರಾರಂಭಿಸಿದ ಸ್ನಾತಕೋತ್ತರ ಕೋರ್ಸಗಳ ಮುಂದುವರಿಕೆ:**

ಎಂ.ಎಸ್ಸಿ / ಎಂ.ಎ / ಎಂ.ಕಾಂ / ಎಂ.ಸಿ.ಎ / ಎಂ.ಬಿ.ಎ / ಎಂ.ವ್ಹಿ.ಎ (ಮಾಸ್ಟರ ಆಫ್ ವಿಜುವಲ್ ಆರ್ಟ್ಸ) ಹಾಗೂ ಅಪ್ಲೈಡ ಆರ್ಟ/ ಪಿ.ಜಿ.ಡಿ.ಸಿ.ಎ/ ಈ ಕಾಮರ್ಸ / ಎಂ.ಎಡ್ / ಎಂ.ಪಿ.ಎಡ್ / ಎಂ.ಎಸ್ಸಿ (ಕಂಪ್ಯೂಟರ ಸೈನ್ಸ) / ಎಂ.ಎಸ್.ಡಬ್ಲೂ/ಎಂ.ಮ್ಯೂಜಿಕ್/ಮಾಸ್ಟರ್ ಆಫ್ ಸೋಶಿಯಲ್ ಎಂಟರ್‌ಪ್ರಿನಿಯರಶಿಫ್ (ಎಂ.ಎಸ್.ಇ)/ಎರಡು ವರ್ಷಗಳ ಮಾಸ್ಟರ ಆಫ್ ಫೈನಾನ್ಸಿಯಲ್ ಮ್ಯಾನೇಜಮೆಂಟ ಸೆಮಿಸ್ಟರ್ ಕೋರ್ಸ ಸಿ.ಬಿ.ಸಿ.ಎಸ್ ಅಡಿಯಲ್ಲಿ/ ಒಂದು ವರ್ಷದ ಮಾಸ್ ಕಮ್ಯುನಿಕೇಶನ್ & ಜರ್ನಲಿಸಂ (ಪಿ.ಜಿ.ಡಿ.ಎಂ.ಸಿ.ಜೆ) ಸ್ನಾತಕೋತ್ತರ ಕೋರ್ಸ (ಎರಡು ಸೆಮಿಸ್ಟರ್)/ ಪಿ.ಜಿ ಡಿಪ್ಲೊಮಾ ಇನ್ ಬಯೋ-ಸ್ಟ್ಯಾಟಿಸ್ಟಿಕ್/ಪಿ.ಜಿ ಡಿಪ್ಲೋಮಾ ಇನ್ ಬ್ಯಾಂಕ ಮ್ಯಾನೇಜಮೆಂಟ (PGDBM) (ಎಂ.ಬಿ.ಎ ಹೊಂದಿರುವ ಮಹಾವಿದ್ಯಾಲಯಗಳಿಗೆ ಮಾತ್ರ ಅನ್ವಯಿಸುತ್ತದೆ.)

(ಈ ಮೇಲೆ ನಮೂದಿಸಿದ ಪಿ.ಜಿ ಡಿಪ್ಲೋಮಾ ಕೋರ್ಸಗಳನ್ನು ಸ್ನಾತಕೋತ್ತರ ವಿಜ್ಞಾನ ಕೋರ್ಸಗಳಿದ್ದ ಮಹಾವಿದ್ಯಾಲಯಗಳಲ್ಲಿ ಮಾತ್ರ ಪ್ರಾರಂಭಿಸಲು ಅವಕಾಶವಿರುತ್ತದೆ) ಸದರ ಕೋರ್ಸಗಳ ಸಂಯೋಜನಾ ಅರ್ಜಿಗಳನ್ನು ಸಲ್ಲಿಸುವ ಸಲುವಾಗಿ ಈ ಕೆಳಗಿನಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

| | | |
|---|---|---|
| 1) | ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ (ದಂಡ ರಹಿತ) | 29-04-2022 ರಿಂದ 10-05-2022 ರ ವರೆಗೆ |
| 2) | ರೂ. 10,981/- ದಂಡ ಶುಲ್ಕದೊಂದಿಗೆ ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕ | 11-05-2022 ರಿಂದ 16-05-2022 ರ ವರೆಗೆ |
| 3) | ರೂ. 21,962/- ದಂಡ ಶುಲ್ಕದೊಂದಿಗೆ ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕ | 17-05-2022 ರಿಂದ 21-05-2022 ರ ವರೆಗೆ |
| 4) | ಮೇಲ್ಕಾಣಿಸಿದ ಅವಧಿ ಮುಗಿದ ನಂತರ ದಂಡ ಶುಲ್ಕ ರೂ. 21,962/- ದೊಂದಿಗೆ ಮತ್ತು ಪ್ರತಿ ದಿನಕ್ಕೆ 2,197/- ದಂಡ ಶುಲ್ಕದೊಂದಿಗೆ ಮುಂದಿನ 07 ದಿನಗಳವರೆಗೆ ಅಂದರೆ ದಿನಾಂಕ: 28-05-2022. | |

ಸ್ನಾತಕೋತ್ತರ ಹಾಗೂ ಬಿಬಿಎ/ಬಿ.ಸಿ.ಎ/ಬಿ.ಕಾಂ(ಸಿ.ಎಸ್)/ಬಿ.ಎಸ್.ಸಿ(ಸಿಎಸ್)/ಬಿ.ಎ.ಎಸ್.ಎಲ್.ಪಿ/ ಬಿ.ಎಸ್.ಡಬ್ಲೂ/ಬಿ.ಎ.ಎಸ್ಸಿ ಕೋರ್ಸಗಳನ್ನು ಪ್ರಾರಂಭಿಸುವವರು ಮಾತ್ರ ಪ್ರಿ-ಕ್ವಾಲಿಫಿಕೇಶನ್ ಅರ್ಜಿ ಸಲ್ಲಿಸಬೇಕಾಗುವದು. ಈ ಅರ್ಜಿಗಳ ಬಗ್ಗೆ ಸ್ಥಾನಿಕ ತನಿಖಾ ಸಮಿತಿಯು ಸದರ ಕೋರ್ಸ ಪ್ರಾರಂಭಿಸಲು ಶಿಫಾರಸ್ಸು ಮಾಡಿದರೆ ನಿಯಮಿತ (ರೆಗ್ಯೂಲರ) ಸಂಯೋಜನಾ ಅರ್ಜಿ ಸಲ್ಲಿಸಬೇಕಾಗುವುದು

1) ಪ್ರಿ-ಕ್ವಾಲಿಫಿಕೇಶನ್ ಅರ್ಜಿ ನಮೂನೆ ಶುಲ್ಕ – ರೂ. 3,661/-
2) ನಿಯಮಿತ (ರೆಗ್ಯೂರಲ್) ಸಂಯೋಜನಾ ಅರ್ಜಿ ಶುಲ್ಕ – ರೂ. 2,197/-

ಅರ್ಜಿ ನಮೂನೆಗಳನ್ನು ಕೆಳಗೆ ನಮೂದಿಸಿದ ವೈಬಸೈಟ್ ಮೂಲಕ ಪಡೆದು ನಿಗದಿತ ಅರ್ಜಿ ಶುಲ್ಕವನ್ನು ಸಂಯೋಜನಾ ಶುಲ್ಕದೊಂದಿಗೆ ಪ್ರತ್ಯೇಕವಾಗಿ ಕ.ವಿ.ವಿ. ಗೆ ಸಂದಾಯ ಮಾಡುವುದು.

ಕಡ್ಡಾಯವಾಗಿ ಆನ್‌ಲೈನ್ ಮುಖಾಂತರ ಭರ್ತಿ ಮಾಡಿದ ಅರ್ಜಿಗಳನ್ನು ಸಂಬಂಧಿಸಿದ ಶುಲ್ಕ ಹಾಗೂ ದಾಖಲೆಗಳೊಂದಿಗೆ (ಮೂರು ಪ್ರತಿಗಳಲ್ಲಿ) ಬೈಂಡ ಮಾಡಿ ನಿರ್ದೇಶಕರು, ಸಿ.ಡಿ.ಸಿ/ಸಂಯೋಜನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ನಿಗದಿತ ದಿನಾಂಕದೊಳಗೆ ಸಲ್ಲಿಸುವುದು ಹಾಗೂ ಅರ್ಜಿಯಲ್ಲಿ ಕ.ವಿ.ವಿ ಯಿಂದ ಕೇಳಿದ ಮಾಹಿತಿಯನ್ನು ಕಡ್ಡಾಯವಾಗಿ ನಮೂದಿಸಿ ಸಂಬಂಧಿಸಿದ ದಾಖಲಾತಿಗಳನ್ನು ಸಲ್ಲಿಸತಕ್ಕದ್ದು. ಒಂದು ವೇಳೆ ಕೇಳಿದ ಮಾಹಿತಿಯು ಅಪೂರ್ಣವಿದ್ದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು.

ಬಿ.ಬಿ.ಎ / ಬಿ.ಸಿ.ಎ / ಬಿ.ಕಾಂ (ಸಿ.ಎಸ್)/ ಬಿ.ಎಸ್ಸಿ (ಕಂಪ್ಯೂಟರ ಸೈನ್ಸ) ಕೋರ್ಸ ಮುಂದುವರಿಕೆ/ ವಿಸ್ತರಣೆಗೆ ಪ್ರತ್ಯೇಕ ಅರ್ಜಿಗಳನ್ನು ಮೂರು ಪ್ರತಿಗಳಲ್ಲಿ ಸಲ್ಲಿಸುವುದು. ಕಡ್ಡಾಯವಾಗಿ ಆನ್‌ಲೈನ್ ಮುಖಾಂತರ ಸಲ್ಲಿಸಿದ ಮೂರು ಪ್ರತಿಗಳನ್ನು ಸಿ.ಡಿ.ಸಿ. ವಿಭಾಗಕ್ಕೆ ಕಳುಹಿಸುವುದು.

ಪ್ರಸಕ್ತ ವರ್ಷದಲ್ಲಿ ಶಾಶ್ವತ ಸಂಯೋಜನೆಗೆ ಅರ್ಜಿ ಸಲ್ಲಿಸದ ಮಹಾವಿದ್ಯಾಲಯಗಳು ಶಾಶ್ವತ ಸಂಯೋಜನೆಯನ್ನು ಪಡೆಯದೇ ಇದ್ದ ಸಂದರ್ಭದಲ್ಲಿ ಅಂತಹ ಮಹಾವಿದ್ಯಾಲಯಗಳು ಪುನಃ 2022-23 ನೇ ಸಾಲಿಗೆ ಮುಂದುವರಿಕೆ ಸಂಯೋಜನಾ ಅರ್ಜಿ ಸಲ್ಲಿಸಬೇಕಾಗುವುದು. ಪರಿಶಿಷ್ಟ ಜಾತಿ ವ ಪಂಗಡದ ಸಂಸ್ಥೆಯವರಿಗೆ ಸಂಯೋಜನೆ ಶುಲ್ಕಗಳಲ್ಲಿ ಮಾತ್ರ ಪ್ರತಿಶತ 50% ರಷ್ಟು ರಿಯಾಯಿತಿ ಇರುತ್ತದೆ. ಹೆಚ್ಚಿನ ಮಾಹಿತಿಯನ್ನು ವಿಶ್ವವಿದ್ಯಾಲಯದ ಸಿ.ಡಿ.ಸಿ/ಸಂಯೋಜನೆ ವಿಭಾಗದಿಂದ ಪಡೆಯಬಹುದು ಅಥವಾ ದೂರವಾಣಿ ಸಂಖ್ಯೆ (0836) 2215353, 2215215 ಕ್ಕೆ ಸಂಪರ್ಕಿಸಬಹುದು.

ಸಂಯೋಜನಾ ಶುಲ್ಕಗಳ ಹಾಗೂ ಅರ್ಜಿ ನಮೂನೆ ಬಗ್ಗೆ ವೆಬ್‌ಸೈಟ್ **www.kud.ac.in** ಮೂಲಕ ಮಾಹಿತಿ ಪಡೆದುಕೊಳ್ಳಬಹುದು. ವೆಬ್‌ಸೈಟನಲ್ಲಿ ನೀಡಿದ ಅಧಿಸೂಚನೆಯ ಎಲ್ಲ ಮಾಹಿತಿಯು ಶರತ್ತು/ತಿದ್ದುಪಡಿಗೊಳಪಟ್ಟಿರುತ್ತದೆ. ಹಾಗೂ ಸರ್ಕಾರದ ಆದೇಶ ದಿನಾಂಕ: 26-04-2022 ರ ಪ್ರಕಾರ ರಾಷ್ಟ್ರೀಯ ಮಾಹಿತಿ ಸಂಸ್ಥೆ (ಎನ್.ಐ.ಸಿ) ಯಿಂದ ಉನ್ನತಿಕರಿಸಿದ ತಂತ್ರಾಂಶದ ಮುಖಾಂತರ ಅರ್ಜಿ ಸಲ್ಲಿಸತಕ್ಕದ್ದು. ತಂತ್ರಾಂಶಕ್ಕೆ ಲಾಗಿನ್ ಆಗುವ ಲಿಂಕ ಈ ರೀತಿ ಆಗಿರುವದನ್ನು ತಮ್ಮ ಗಮನಕ್ಕೆ ತರಲಾಗಿದೆ.

**https://www.onlineaffiliation.karnataka.gov.in/Affiliation22_23/login.aspx**

ಕುಲಸಚಿವರು

ಗೆ,

1) ಪ್ರಾಚಾರ್ಯರು, ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಂಯೋಜನೆ ಹೊಂದಿದ ಎಲ್ಲ ಮಹಾವಿದ್ಯಾಲಯಗಳ ಮಾಹಿತಿಗಾಗಿ
2) ನಿರ್ದೇಶಕರು, ಕಂಪ್ಯೂಟರ ನೆಟ್‌ವರ್ಕ ವಿಭಾಗ, ಕ.ವಿ.ವಿ ಧಾರವಾಡ ಇವರ ಮಾಹಿತಿಗಾಗಿ ಹಾಗೂ ವಿವರವಾದ ಮಾಹಿತಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟನಲ್ಲಿ ಜೂನ್ 30, 2022ರ ವರೆಗೆ ಪ್ರಕಟಪಡಿಸಲು ತಿಳಿಸಲಾಗಿದೆ.

# ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
## (ಸಿಡಿಸಿ/ಸಂಯೋಜನೆ ವಿಭಾಗ)

2022-23 ನೇ ಶೈಕ್ಷಣಿಕ ವರ್ಷಕ್ಕೆ ಸಂಯೋಜನಾ ಮಂಜೂರಾತಿಗಾಗಿ ಸಂಯೋಜನಾ ಅರ್ಜಿ ಸಲ್ಲಿಸಲು ಸಂಬಂಧಿಸಿದ ಶುಲ್ಕಗಳ ಮಾಹಿತಿ.

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಧಾರವಾಡ / ಹಾವೇರಿ / ಗದಗ / ಕಾರವಾರ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಾರಂಭಿಸುವ ಮಹಾವಿದ್ಯಾಲಯಗಳ ಸಂಘ ಸಂಸ್ಥೆಯವರು ಹೊಸ ಸಂಯೋಜನಾ ಶುಲ್ಕ ಈಗಿರುವ ಮಹಾವಿದ್ಯಾಲಯಗಳ ಮುಂದುವರಿಕೆ ಮತ್ತು ವಿಸ್ತರಣೆ ಸಂಯೋಜನಾ ಶುಲ್ಕ, ಶಾಶ್ವತ ಸಂಯೋಜನಾ ಶುಲ್ಕ ಹಾಗೂ ವಾರ್ಷಿಕ ಶುಲ್ಕಗಳನ್ನು ಕೆಳಗಿನಂತೆ ನಿಗದಿಪಡಿಸಿಲಾಗಿದೆ:

**ವಿಶೇಷ ಸೂಚನೆ :**

**I) ವಾರ್ಷಿಕ ಶುಲ್ಕದ ಹಣವನ್ನು ಎಲ್ಲ ಮಹಾವಿದ್ಯಾಲಯಗಳು ಪ್ರತಿ ವರ್ಷ ಸಲ್ಲಿಸಬೇಕು.**

1) ಈಗಾಗಲೇ ಕ.ವಿ.ವಿ ನಿಗದಿಪಡಿಸಿದ ಕಲಾ ಮತ್ತು ವಿಜ್ಞಾನ ಪದವಿ ಕೋರ್ಸಿನಲ್ಲಿ ಬೋಧಿಸಲಾಗುತ್ತಿರುವ ಐಚ್ಛಿಕ ವಿಷಯಗಳನ್ನು ಮೂರು ಸಮಾನ ವಿಷಯಗಳ ಗುಂಪುಗಳನ್ನಾಗಿ ವಿಂಗಡಿಸಿ ಸಂಯೋಜನಾ ಮಂಜೂರಾತಿ ಅರ್ಜಿಯಲ್ಲಿ ಸಂಯುಕ್ತಗೊಳಿಸಿ ಐಚ್ಛಿಕ ವಿಷಯಗಳ ಹಾಗೂ ಪ್ರವೇಶ ಸಂಖ್ಯೆ ಎಲ್ಲವನ್ನು ವಿವರವಾಗಿ ನಮೂದಿಸುವುದು. ಈ ವಿಷಯದಲ್ಲಿ ಯಾವುದೇ ಮಾಹಿತಿಯ ಅಗತ್ಯವಿದ್ದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸಿ.ಡಿ.ಸಿ/ಸಂಯೋಜನಾ ವಿಭಾಗವನ್ನು ಸಂಪರ್ಕಿಸುವುದು.

2) ಪ್ರಸ್ತುತ ಮಹಾವಿದ್ಯಾಲಯಗಳಲ್ಲಿ ಬಿ.ಬಿ.ಎ / ಬಿ.ಸಿ.ಎ ಮತ್ತು ಬಿ.ಕಾಂ(ಸಿ.ಎಸ್)/ ಬಿ.ಎಸ್ಸಿ / (ಕಂಪ್ಯೂಟರ ಸೈನ್ಸ) ಕೋರ್ಸನ್ನು ಪ್ರಾರಂಭಿಸಿರುವ, ಈಗಾಗಲೇ ಮುಂದುವರಿಕೆ/ ವಿಸ್ತರಣಾ ಸಂಯೋಜನೆಯನ್ನು ಪಡೆದಿರುವ ಮಹಾವಿದ್ಯಾಲಯಗಳ ಮುಂದುವರಿಕೆ ಸಂಯೋಜನಾ ಮಂಜುರಾತಿಗಾಗಿ ಪ್ರತ್ಯೇಕ ಅರ್ಜಿ ಸಲ್ಲಿಸತಕ್ಕದ್ದು. ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆ ಹೆಚ್ಚಿಸಲು ಸರ್ಕಾರದ ಅನುಮತಿ ಅವಶ್ಯವಾಗಿದ್ದು ಪ್ರತ್ಯೇಕ ಅರ್ಜಿಯ ಜೊತೆ ಮನವಿ ಸಲ್ಲಿಸುವುದು ಹಾಗೂ ಪ್ರತ್ಯೇಕ ಸಂಯೋಜನೆ ಶುಲ್ಕ ಭರಿಸುವುದು. (ವಿದ್ಯಾರ್ಥಿಗಳ ಪ್ರವೇಶ ಮಿತಿಯು ತನಿಖಾ ಸಮಿತಿಯವರ ಶಿಫಾರಸ್ಸಿಗೆ ಒಳಪಟ್ಟಿದೆ).

**II) ಹೊಸ ಸಂಯೋಜನೆಗೆ ಅರ್ಜಿ ಸಲ್ಲಿಸುವ ಕುರಿತು.**

ಹೊಸ ಸಂಯೋಜನೆಗೆ ನಿಗದಿಪಡಿಸಿದ ಅರ್ಜಿ ನಮೂನೆಯ ಮೂರು ಪ್ರತಿಗಳನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಮತ್ತು ಕೆಳಗೆ ತಿಳಿಸಿದ ಸಂಯೋಜನಾ ಶುಲ್ಕ ಕ.ವಿ.ವಿ ವೆಬ್‌ಸೈಟ್ ಮುಖಾಂತರ ಆನ್‌ಲೈನ್ ಫೀ ಭರಿಸಿ ಸದರ ರಶೀದಿಯನ್ನು ಅರ್ಜಿಯೊಂದಿಗೆ ಲಗತ್ತಿಸಿ, ಪ್ರಕಟಣೆಯಲ್ಲಿ ತಿಳಿಸಿದ ದಿನಾಂಕದೊಳಗಾಗಿ ಕಚೇರಿಗೆ ತಲುಪುವಂತೆ ಕಳುಹಿಸುವುದು.

**ಸೂಚನೆ:** ಹೊಸ ಸಂಯೋಜನೆಗೆ ಕಲಾ/ವಿಜ್ಞಾನ ಮತ್ತು ವಾಣಿಜ್ಯ ಪದವಿಗಳಲ್ಲಿ (ವೃತ್ತಿಪರ ಶಿಕ್ಷಣ ಹೊರತುಪಡಿಸಿ) ಒಂದಕ್ಕಿಂತ ಹೆಚ್ಚು ಕೋರ್ಸಗಳನ್ನು ಪ್ರಾರಂಭಿಸಲು ಕೇಳಿಕೊಂಡಲ್ಲಿ ವಾಣಿಜ್ಯ ಕೋರ್ಸಿಗೆ ರೂ. 65,885/- ಶುಲ್ಕದೊಂದಿಗೆ ಕಲಾ ಹಾಗೂ ವಿಜ್ಞಾನ ಕೋರ್ಸಿಗೆ ಪ್ರತ್ಯೇಕವಾಗಿ ಪ್ರತಿ ಕೋರ್ಸಿಗೆ ರೂ. 24,158/- ಶುಲ್ಕವನ್ನು ಭರಿಸುವುದು

**ಟಿಪ್ಪಣಿ :**

i) ಪ್ರಸ್ತುತ ವರ್ಷ ಪ್ರಾರಂಭಿಸಬೇಕೆಂದಿದ್ದ ಮಹಾವಿದ್ಯಾಲಯವನ್ನು ಮುಂದಿನ ವರ್ಷ ಪ್ರಾರಂಭಿಸಬೇಕೆಂದು ಸ್ಥಾನಿಕ ತನಿಖಾ ಸಮಿತಿಯ ಶಿಫಾರಸ್ಸು ಮಾಡಿದಲ್ಲಿ ಅಥವಾ ಸಂಬಂಧಪಟ್ಟ ಸಂಸ್ಥೆಯವರೇ ಮುಂದಿನ ವರ್ಷ ಪ್ರಾರಂಭಿಸುವುದಾಗಿ ಕೇಳಿಕೊಂಡಲ್ಲಿ ಸಂಬಂಧಪಟ್ಟ ಸಂಸ್ಥೆಯವರು/ ಮಹಾವಿದ್ಯಾಲಯದವರು ಆ ಕುರಿತು ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಕೋರ್ಸಿನ ಮುಂದುವರಿಕೆ ಶುಲ್ಕವನ್ನು ಭರಿಸಬೇಕಾಗುವುದು.

ii) ತನಿಖಾ ಸಮಿತಿಯು ಎರಡನೇ ಬಾರಿಗೆ ತನಿಖೆಗೆ ಆದೇಶಿಸಿದಲ್ಲಿ ತನಿಖಾ ಶುಲ್ಕ ರೂ. 29,282/- ಗಳನ್ನು ಭರಿಸಬೇಕಾಗುವುದು.

1) **ಹೊಸ ಸಂಯೋಜನಾ ಶುಲ್ಕ :**

| ಕೋರ್ಸಗಳ ವಿವರಗಳು | ಪ್ರಿ-ಕ್ವಾಲಿಫಿಕೇಶನ್ ತನಿಖಾ ಶುಲ್ಕ | ಹೊಸ ಸಂಯೋಜನೆ |
|---|---|---|
| ಬಿ.ಎ/ಬಿ.ಎಸ್ಸಿ/ಬಿ.ವಿ.ಎ./ಬಿ.ಮ್ಯೂಜಿಕ/ಐ.ಎಲ್.ಆರ್.ಡಿ. | | ರೂ. 48,315/- |
| ಬಿ.ಕಾಂ | | ರೂ. 65,885/- |
| ಬಿ.ಬಿ.ಎ/ಬಿ.ಕಾಂ (ಸಿ.ಎಸ್)/ ಬಿ.ಎಸ್.ಡಬ್ಲ್ಯೂ / ಬಿ.ಟಿ.ಟಿ.ಎಂ | ರೂ. 36,602/- | ರೂ. 62,956/- ಪ್ರಿ-ಕ್ವಾಲಿಫಿಕೇಶನ್ ದಲ್ಲಿ ಶಿಫಾರಸ್ಸು ಮಾಡಿದರೆ ಮಾತ್ರ |
| ಬಿ.ಸಿ.ಎ, / ಬಿ.ಎ.ಎಸ್.ಎಲ್.ಪಿ / ಬಿ.ಎಸ್ಸಿ. (ಸಿ.ಎಸ್.)/ಬಿ.ಎ.ಎಸ್.ಸಿ. | ರೂ. 36,602/- | ರೂ. 73,205/- ಪ್ರಿ-ಕ್ವಾಲಿಫಿಕೇಶನ್ ದಲ್ಲಿ ಶಿಫಾರಸ್ಸು ಮಾಡಿದರೆ ಮಾತ್ರ |
| ಬಿ.ಎಡ್/ಬಿ.ಪಿ.ಎಡ್ | ರೂ. 36,602/- | ರೂ. 1,17,128/- |
| ಸರ್ಟಿಫಿಕೇಟ ಕೋರ್ಸ ಇನ್ ಯೋಗಾ | | ರೂ 21,962/- |

2) **ಮುಂದುವರಿಕೆ ಹಾಗೂ ವಿಸ್ತರಣೆ ಸಂಯೋಜನಾ ಮಂಜೂರಾತಿಗಾಗಿ ಅರ್ಜಿ ಸಲ್ಲಿಸುವ ಕುರಿತು.**

ಮಹಾವಿದ್ಯಾಲಯಗಳ ಮುಂದುವರಿಕೆ/ವಿಸ್ತರಣೆ ಸಂಯೋಜನಾ ಮಂಜೂರಾತಿಗಾಗಿ ನಿಗದಿತ ನಮೂನೆಯಲ್ಲಿ ಸಂಬಂಧಿಸಿದ ದಾಖಲೆಗಳನ್ನು ಲಗತ್ತಿಸಿ ಮೂರು ಪ್ರತಿಗಳಲ್ಲಿ ಕೆಳಗೆ ತಿಳಿಸಿದಂತೆ ನಿಗದಿತ ಶುಲ್ಕವನ್ನು ಆನ್‌ಲೈನ್ ಮೂಲಕ ಭರಿಸಿ ಸದರ ರಶೀದಿಯನ್ನು ಅರ್ಜಿಯೊಂದಿಗೆ ಲಗತ್ತಿಸಿ, ಪ್ರಕಟಣೆಯಲ್ಲಿ ತಿಳಿಸಿದ ದಿನಾಂಕದೊಳಗಾಗಿ ಕಚೇರಿಗೆ ತಲುಪುವಂತೆ ಸಲ್ಲಿಸುವುದು.

**ಟಿಪ್ಪಣಿ :**

I. ಹೊಸ ಕೋರ್ಸ ಹಾಗೂ ಹೊಸ ವಿಷಯಗಳ ಸಂಯೋಜನೆಯನ್ನು ಪ್ರಾರಂಭದಿಂದ ವಿಸ್ತರಣಾ ಸಂಯೋಜನೆ ಎಂದು ಪರಿಗಣಿಸಲಾಗುವುದು. ವಿಸ್ತರಣಾ ಸಂಯೋಜನೆಯನ್ನು ಹೊಸ ಕೋರ್ಸ/ವಿಷಯಗಳ ಅಂತಿಮ ವರ್ಷದವರೆಗೆ ಮಾತ್ರ ಎಂದು ಪರಿಗಣಿಸಲಾಗುವುದು. ತದನಂತರ ಮುಂದುವರಿಕೆ ಸಂಯೋಜನೆ ಎಂದು ಪರಿಗಣಿಸಲಾಗುವುದು.

II. ಯಾವುದೇ ಪ್ರಸ್ತುತ ಕೋರ್ಸಿನ ಜೊತೆಗೆ ಹೊಸ ವಿಷಯ ಪ್ರಾರಂಭಿಸಲು ವಿಸ್ತರಣಾ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದಲ್ಲಿ ಹೊಸ ವಿಷಯದ ಬಗೆಗಿನ ಶುಲ್ಕದೊಂದಿಗೆ ವಿಸ್ತರಣಾ ಶುಲ್ಕವನ್ನು ಭರಿಸಬೇಕಾಗುವುದು.

III. ಸಂಯೋಜನಾ ಅರ್ಜಿಯಲ್ಲಿ ವಿಶ್ವವಿದ್ಯಾಲಯವು ನಿಗದಿಪಡಿಸಿದ ವಿಷಯಗಳ ಗುಂಪುಗಳ ಸರಿಯಾದ ಮಾಹಿತಿ ಒದಗಿಸುವುದು. ಮೂಲ ವಿಷಯ ಹಾಗೂ ಐಚ್ಚಿಕ ವಿಷಯಗಳನ್ನು ಪ್ರತ್ಯೇಕವಾಗಿ ನಮೂದಿಸುವುದು.

IV. ಬಿ.ಕಾಂ ಕೋರ್ಸಗೆ ಕಂಪ್ಯೂಟರ್ ಅಪ್ಲಿಕೇಶನ್ ವಿಷಯ ಕಡ್ಡಾಯವಾಗಿದೆ.

V. ಸಂಯೋಜನಾ ಅರ್ಜಿಯೊಂದಿಗೆ ಹಿಂದಿನ ವರ್ಷ ಪಡೆದುಕೊಳ್ಳಲಾದ ಸಂಯೋಜನಾ ಅಧಿಸೂಚನೆಯ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸುವುದು.

VI. ವಿದ್ಯಾರ್ಥಿಗಳ ಪ್ರಮಾಣದಲ್ಲಿ ಹೆಚ್ಚಳ ಬಯಸಿ ಅರ್ಜಿ ಸಲ್ಲಿಸುವವರು ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವುದು ಮತ್ತು ವಿದ್ಯಾರ್ಥಿ ಪ್ರಮಾಣ ಮಿತಿ ಹೆಚ್ಚಳ ಶುಲ್ಕವನ್ನು ಕಡ್ಡಾಯವಾಗಿ ಭರಿಸುವುದು (ಪ್ರತಿ ಕೋರ್ಸಿಗೆ ಪ್ರತ್ಯೇಕವಾಗಿ ಶುಲ್ಕ ಭರಿಸುವುದು.)

**ಮುಂದುವರಿಕೆ ಮತ್ತು ವಿಸ್ತರಣೆ ಸಂಯೋಜನಾ ಶುಲ್ಕ :**

| ಕೋರ್ಸಗಳ ವಿವರ | ಮುಂದುವರಿಕೆ ಶುಲ್ಕ | ವಿಸ್ತರಣಾ ಶುಲ್ಕ |
|---|---|---|
| ಬಿ.ಎ/ಬಿ.ಎಸ್ಸಿ/ಬಿ.ಎಸ್ಸಿ.(ಸಿ.ಎಸ್.) ಬಿ.ವಿ.ಎ./ಬಿ.ಮ್ಯೂಜಿಕ | ರೂ. 14,641/- | ರೂ. 17,569/- |
| ಬಿ.ಕಾಂ | ರೂ. 17,569/- | ರೂ. 17,569/- |
| ಬಿ.ಬಿ.ಎ/ಬಿ.ಕಾಂ (ಸಿ.ಎಸ್)/ ಬಿ.ಎಸ್.ಡಬ್ಲ್ಯೂ/ಬಿ.ಟಿ.ಟಿ.ಎಂ./ ಬಿ.ಎ.ಎಸ್.ಎಲ್.ಪಿ | ರೂ. 14,641/- | ರೂ. 14,641/- |
| ಬಿ.ಸಿ.ಎ | ರೂ. 14,641/- | ರೂ. 14,641/- |

| | | |
|---|---|---|
| ಬಿ.ಎಡ್ | ರೂ. 58,564/- | ರೂ. 58,564/- |
| ಬಿ.ಪಿ.ಎಡ್ | ರೂ. 23,426/- | ರೂ. 23,426/- |
| ಪ್ರತಿ ವಿಷಯಕ್ಕೆ | | ರೂ. 10,981/- |
| ವೋಕೇಶನಲ್ ಪ್ರತಿ ಐಚ್ಛಿಕ ವಿಷಯಗಳಿಗೆ | | ರೂ. 21,962/- |
| ವೋಕೇಶನಲ್ ಹೆಚ್ಚಿನ ವಿಷಯಗಳಿಗೆ | | ರೂ. 21,962/- |
| ವಾಣಿಜ್ಯ ಹೆಚ್ಚಿನ ಕೋರ್ಸಿಗೆ | | ರೂ. 29,282/- |
| ಕಲಾ ಹಾಗೂ ವಿಜ್ಞಾನ ಹೆಚ್ಚಿನ ಕೋರ್ಸ | | ರೂ. 24,158/- |
| ಸರ್ಟಿಫಿಕೇಟ ಕೋರ್ಸ ಇನ ಯೋಗಾ | ರೂ. 10,981/- | ರೂ. 10,981/- |

**ಇತರೆ ಶುಲ್ಕಗಳು :**

| ಕೋರ್ಸಗಳ ವಿವರಗಳು | ಅರ್ಜಿ ಶುಲ್ಕ | ಸ್ಥಳ ಬದಲಾವಣೆ ಶುಲ್ಕ | ಹೆಸರು ಬದಲಾವಣೆ ಶುಲ್ಕ | ಕಾಲೇಜಿನ ಆಡಳಿತ ಮಂಡಳ ಬದಲಾವಣೆ ಶುಲ್ಕ (ಎರಡು ಆಡಳಿತ ಮಂಡಳಿಯವರಿಗೆ | ವಿ.ಪ್ರ ಮಿತಿ ಹೆಚ್ಚಳ ಶುಲ್ಕ | ಎರಡನೇಯ ಬಾರಿ ತನಿಖಾ ಶುಲ್ಕ |
|---|---|---|---|---|---|---|
| ಬಿ.ಎ/ಬಿ.ಎಸ್ಸಿ/ ಬಿ.ವಿ.ಎ./ಬಿ.ಮ್ಯೂಜಿಕ/ಬಿ. ಎ/ಬಿ.ಕಾಂ (ಸಿ.ಎಸ್) / ಬಿ.ಎಸ್.ಡಬ್ಲ್ಯೂ/ ಬಿ.ಸಿ.ಎ & ಬಿ.ಎಸ್ಸಿ (ಸಿ.ಎಸ್)/ ಬಿ.ಎಡ್ /ಬಿ.ಪಿ.ಎಡ್/ಬಿ.ಟಿ.ಟಿ.ಎ೦/ ಬಿ.ಎ.ಎಸ್.ಎಲ್.ಪಿ | ರೂ. 2,197/- | ರೂ. 36,602/ - | ರೂ. 21,962/- | ರೂ. 43,923/- + 43,923/- | ರೂ. 17,569/- ಪ್ರತಿ ಕೋರ್ಸಿಗೆ 25 ವಿದ್ಯಾರ್ಥಿಗಳಿಗೆ ಮಾತ್ರ ನಂತರ ಪ್ರತಿ ವಿದ್ಯಾರ್ಥಿಗೆ ರೂ. 1,464/- | ರೂ. 29,282/- |
| ಬಿ.ಕಾಂ | ರೂ. 2,197/- | ರೂ. 36,602/ - | ರೂ. 21,962/- | ರೂ. 43,923/- + 43,923/- | ರೂ. 21,962/- ಪ್ರತಿ ಕೋರ್ಸಿಗೆ 25 ವಿದ್ಯಾರ್ಥಿಗಳಿಗೆ ಮಾತ್ರ ನಂತರ ಪ್ರತಿ ವಿದ್ಯಾರ್ಥಿಗೆ ರೂ. 1,464/- | ರೂ. 29,282/- |

**3) a) ಹೊಸದಾಗಿ ಶಾಶ್ವತ ಸಂಯೋಜನೆ ಅರ್ಜಿ ಸಲ್ಲಿಸುವ ಕುರಿತು:**

ಹೊಸದಾಗಿ ಶಾಶ್ವತ ಸಂಯೋಜನೆಗೆ ಅರ್ಜಿ ಸಲ್ಲಿಸುವ ಮಹಾವಿದ್ಯಾಲಯಗಳು ನ್ಯಾಕ್ ಮಾನ್ಯತೆಯನ್ನು ಕಡ್ಡಾಯವಾಗಿ ಹೊಂದಿರಬೇಕು. ಶಾಶ್ವತ ಸಂಯೋಜನೆ ಪಡೆಯಲಿಚ್ಚಿಸುವ ಮಹಾವಿದ್ಯಾಲಯಗಳು/ ಸಂಸ್ಥೆಗಳು ವಿಶ್ವವಿದ್ಯಾಲಯದಿಂದ ನಿರಂತರವಾಗಿ ಕಳೆದ 5 (ಐದು) ವರ್ಷಗಳ ಮುಂದುವರಿಕೆ ಸಂಯೋಜನೆಯನ್ನು ಹೊಂದಿರಬೇಕು (ಅರ್ಜಿಯೊಂದಿಗೆ ಅಧಿಸೂಚನೆಗಳ ಪ್ರತಿಗಳನ್ನು ಲಗತ್ತಿಸುವುದು) ಮತ್ತು ನ್ಯಾಕ್ ಮಾನ್ಯತೆ ಪಡೆದ ಬಗ್ಗೆ ಮಾಹಿತಿಯನ್ನು ದಾಖಲಾತಿಯೊಂದಿಗೆ ಕಡ್ಡಾಯವಾಗಿ ಲಗತ್ತಿಸುವುದು (ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಪ್ರಕರಣ 62). ಶಾಶ್ವತ ಸಂಯೋಜನಾ ಅರ್ಜಿಗೆ ಸಂಬಂಧಿಸಿದ ದಾಖಲೆಗಳನ್ನು ಲಗತ್ತಿಸಿದ ಮೂರು ಮುದ್ರಿತ ಅರ್ಜಿಗಳನ್ನು ಕೆಳಗೆ ತಿಳಿಸಿದಂತೆ ಅರ್ಜಿಗೆ ಸಂಬಂಧಿಸಿದ ಶುಲ್ಕವನ್ನು ಕ.ವಿ.ವಿ ವೆಬ್‌ಸೈಟ್ ಮುಖಾಂತರ ಆನ್‌ಲೈನ್ ಫೀ ಭರಿಸಿ ಸದರ ರಶೀದಿಯನ್ನು ಅರ್ಜಿಯೊಂದಿಗೆ ಲಗತ್ತಿಸಿ, ಪ್ರಕಟಣೆಯಲ್ಲಿ ತಿಳಿಸಿದ ದಿನಾಂಕದೊಳಗಾಗಿ ಕಚೇರಿಗೆ ತಲುಪುವಂತೆ ಸಲ್ಲಿಸುವುದು.

**b) ಶಾಶ್ವತ ಸಂಯೋಜನೆ ಮುಂದುವರಿಕೆ ಕುರಿತು:**

ಅ) ಈಗಾಗಲೇ ಶಾಶ್ವತ ಸಂಯೋಜನೆಯ ನಿಗದಿತ ಅವಧಿ ಮುಗಿದ ಮಹಾವಿದ್ಯಾಲಯದವರು ಶಾಶ್ವತ ಸಂಯೋಜನೆಯ ತನಿಖೆಗೆ ನಿಗದಿತ ಅವಧಿಯಲ್ಲಿ ತನಿಖಾ ಅರ್ಜಿ ಸಲ್ಲಿಸುವುದು.

ಬ) ಶಾಶ್ವತ ಸಂಯೋಜನೆ ಹೊಂದಿದ ಮಹಾವಿದ್ಯಾಲಯಗಳು ವಿದ್ಯಾರ್ಥಿಗಳ ಪ್ರಮಾಣ ಹೆಚ್ಚಳಕ್ಕೆ ಅರ್ಜಿ ಸಲ್ಲಿಸಲು ಬಯಸಿದ್ದಲ್ಲಿ ಸಂಯೋಜನಾ ಅರ್ಜಿ ಮತ್ತು ವಿದ್ಯಾರ್ಥಿ ಪ್ರಮಾಣದ ಹೆಚ್ಚಳದ ಶುಲ್ಕದೊಂದಿಗೆ ಅರ್ಜಿ ಸಲ್ಲಿಸುವುದು.

4) **ಶಾಶ್ವತ ಸಂಯೋಜನೆ ಶುಲ್ಕಗಳು :**

| ಕೋರ್ಸ್‌ಗಳ ವಿವರ | ಶಾಶ್ವತ ಸಂಯೋಜನೆ |
|---|---|
| ಬಿ.ಎ/ಬಿ.ಎಸ್ಸಿ/ಬಿ.ವಿ.ಎ./ಬಿ.ಮ್ಯೂಜಿಕ/ | ರೂ. 43,923/- |
| ಬಿ.ಕಾಂ | ರೂ. 58,564/- |
| ಬಿ.ಬಿ.ಎ/ಬಿ.ಕಾಂ (ಸಿ.ಎಸ್)/ ಬಿ.ಎಸ್.ಡಬ್ಲ್ಯೂ/ | ರೂ. 1,34,697/- |
| ಬಿ.ಸಿ.ಎ / ಬಿ.ಎ.ಎಸ್.ಎಲ್.ಪಿ / ಬಿ.ಎಸ್ಸಿ (ಸಿ.ಎಸ್) | ರೂ. 1,34,697/- |
| ಬಿ.ಎಡ್ | ರೂ. 73,205/- |
| ಬಿ.ಪಿ.ಎಡ್ | ರೂ. 73,205/- |

5) **ಶಾಶ್ವತ ಸಂಯೋಜನೆಯ ನವೀಕರಣದ ತನಿಖಾ ಶುಲ್ಕ :**

| ಕೋರ್ಸ್‌ಗಳ ವಿವರ | ಶಾಶ್ವತ ಸಂಯೋಜನೆ ಮುಂದುವರಿಕೆ ಶುಲ್ಕ |
|---|---|
| ಬಿ.ಎ/ಬಿ.ಎಸ್ಸಿ/ಬಿ.ವಿ.ಎ./ಬಿ.ಮ್ಯೂಜಿಕ/ಬಿ.ಎಸ್ಸಿ (ಸಿ.ಎಸ್) | ರೂ. 20,497/- |
| ಬಿ.ಕಾಂ | ರೂ. 29,282/- |
| ಬಿ.ಬಿ.ಎ/ಬಿ.ಕಾಂ (ಸಿ.ಎಸ್)/ ಬಿ.ಎಸ್.ಡಬ್ಲ್ಯೂ | ರೂ. 18,302/- |
| ಬಿ.ಸಿ.ಎ, & ಬಿ.ಎ.ಎಸ್.ಎಲ್.ಪಿ | ರೂ. 18,302/- |
| ಬಿ.ಎಡ್ | ರೂ. 90,774/- |
| ಬಿ.ಪಿ.ಎಡ್ | ರೂ. 29,282/- |
| ಪ್ರತಿ ವಿಷಯಕ್ಕೆ | ರೂ. 14,641/- |
| ವೋಕೇಶನಲ್ ಪ್ರತಿ ಐಚ್ಛಿಕ ವಿಷಯಗಳಿಗೆ | ರೂ. 29,282/- |
| ಹೆಚ್ಚಿನ ಕೋರ್ಸ್‌ಗಳಿಗೆ ವೋಕೇಶನಲ್ ವಿಷಯಗಳಿಗೆ | ರೂ. 29,282/- |

6) **ಠೇವಣಿ ಹಣ ಕುರಿತು:**

ಯಾವುದೇ ಸಂಘ/ಸಂಸ್ಥೆಯವರು ಪ್ರಸಕ್ತ ವರ್ಷದಿಂದ ಹೊಸ ಮಹಾವಿದ್ಯಾಲಯವನ್ನು/ಕೋರ್ಸ ಪ್ರಾರಂಭಿಸಬೇಕೆಂದು ಇಚ್ಛಿಸಿದಲ್ಲಿ ಸಂಬಂಧಪಟ್ಟ ಸಂಘ/ಸಂಸ್ಥೆಯವರು ವಿಶ್ವವಿದ್ಯಾಲಯದಲ್ಲಿ ಕೆಳಗೆ ತಿಳಿಸಿದ ಠೇವಣಿ ಶುಲ್ಕವನ್ನು ಠೇವಣಿ ಇಡಬೇಕಾಗುವುದು. ಈ ಠೇವಣಿ ಹಣವನ್ನು ಹೊಸ ಮಹಾವಿದ್ಯಾಲಯ ಪ್ರಾರಂಭಿಸುವದಕ್ಕಿಂತ ಮುಂಚಿತವಾಗಿಯೇ ವಿಶ್ವವಿದ್ಯಾಲಯದ ನಿಯಮಾನುಸಾರ ತುಂಬಿ ಸಂಯೋಜನಾ ಅಧಿಸೂಚನೆಯನ್ನು ಪಡೆದುಕೊಂಡು ನಂತರ ಹೊಸ ಕೋರ್ಸ/ಮಹಾವಿದ್ಯಾಲಯವನ್ನು ಪ್ರಾರಂಭಿಸಬೇಕಾಗುವುದು.

7) **ಠೇವಣಿ ಹಣ :**

| | | |
|---|---|---|
| 1) | ಬಿ.ಎ/ಬಿ.ಕಾಂ/ಬಿ.ಎಸ್.ಸಿ/ಬಿ.ಮ್ಯೂಜಿಕ್ ಭಾಗ – 1, 2 ಮತ್ತು 3 | ರೂ 8,78,460/- ಮೂರು ಕಂತುಗಳಲ್ಲಿ |
| 2) | ಬಿ.ಎಡ್ | ರೂ. 7,32,050/- ಎರಡು ಕಂತುಗಳಲ್ಲಿ |
| 3) | ದೈಹಿಕ ಶಿಕ್ಷಣ ಕೋರ್ಸ | ರೂ. 5,85,640/- ಎರಡು ಕಂತುಗಳಲ್ಲಿ |
| 4) | ಸರ್ಟಿಫಿಕೇಟ ಕೋರ್ಸ ಇನ್ ಯೋಗಾ | ರೂ. 1,46,410/- ಒಂದು ಕಂತಿನಲ್ಲಿ |
| 5) | ಬಿ.ವ್ಹಿ.ಎ. ಕೋರ್ಸ | ರೂ. 6,58,845/- ಮೂರು ಕಂತುಗಳಲ್ಲಿ |
| 6) | ಬಿ.ಎಸ್.ಡಬ್ಲ್ಯೂ ಕೋರ್ಸ | ರೂ. 6,58,845/- ಮೂರು ಕಂತುಗಳಲ್ಲಿ |
| 7) | ಬಿ.ಬಿ.ಎ/ಬಿ.ಸಿ.ಎ/ಬಿ.ಕಾಂ (ಸಿ.ಎಸ್)/ಬಿ.ಎಸ್.ಸಿ (ಕಂಪ್ಯೂಟರ ಸೈನ್ಸ) | ರೂ. 6,58,845/- ಮೂರು ಕಂತುಗಳಲ್ಲಿ |
| 8) | [illegible] (BCI [illegible] | ರೂ. 1,71,880/[illegible] |

ವಿ.ಸೂ : ಒಂದು ವೇಳೆ ಸಂಸ್ಥೆಯವರು ಸ್ವಯಂ ಇಚ್ಛೆಯಿಂದ ಮಹಾವಿದ್ಯಾಲಯವನ್ನು ಮುಚ್ಚಿದರೆ ಕೆ.ಎಸ್.ಯು ಆ್ಯಕ್ಟ 2000 ಉಪಪ್ರಕರಣ ೬೫ ರ ಪ್ರಕಾರ ವಿಶ್ವವಿದ್ಯಾಲಯವು ಕ್ರಮ ಕೈಕೊಂಡ ಮಹಾವಿದ್ಯಾಲಯದ ಠೇವಣಿ ನಿಗದಿ ಪಡಿಸಿದ ಹಣದಲ್ಲಿ ಶೇಕಡಾ 10% ರಷ್ಟನ್ನು ಮುರಿದುಕೊಂಡು ಉಳಿದ ಹಣ ಸ್ವಯಂ ಮುಚ್ಚುವ ಕುರಿತು ಅಧಿಸೂಚನೆ ಹೊರಡಿಸಿದ ನಂತರ ಮರಳಿ ಕೊಡಲಾಗುವುದು.

8) **ವಾರ್ಷಿಕ ಶುಲ್ಕ (ಪದವಿ/ವೃತ್ತಿಪರ ಕೋರ್ಸಗಳಿಗೆ)**

ಕರ್ನಾಟಕ ವಿಶ್ವವಿದ್ಯಾಲಯದಿಂದ ಸಂಯೋಜನೆ ಪಡೆದ ಎಲ್ಲ ಮಹಾವಿದ್ಯಾಲಯಗಳು (ಶಾಶ್ವತ ಸಂಯೋಜನೆ ಹೊಂದಿದ ಮಹಾವಿದ್ಯಾಲಯಗಳು ಹಾಗೂ ಹೊಸ ಸಂಯೋಜನೆ ಹೊಂದಿದ ಮಹಾವಿದ್ಯಾಲಯಗಳು ಸಹಿತ) ಪ್ರತಿ ವರ್ಷ ವಿಶ್ವವಿದ್ಯಾಲಯಕ್ಕೆ ಕೆಳಗೆ ತಿಳಿಸಿದ ವಾರ್ಷಿಕ ಶುಲ್ಕಗಳನ್ನು ಪಾವತಿಮಾಡುವುದು ಕಡ್ಡಾಯವಾಗಿರುತ್ತದೆ. ಬಿ.ಬಿ.ಎ/ಬಿ.ಸಿಎ ಮತ್ತು ಬಿ.ಕಾಂ. (ಸಿ.ಎಸ್)/ ಬಿ.ಎಸ್.ಸಿ (ಸಿ.ಎಸ್) ಕೋರ್ಸ ಪ್ರಸಕ್ತ ಮಹಾವಿದ್ಯಾಲಯದಲ್ಲಿ ಪ್ರಾರಂಭಿಸಿದ್ದರೂ ಸಹ ಈ ಕೋರ್ಸಗೆ ಪ್ರತ್ಯೇಕ ವಾರ್ಷಿಕ ಶುಲ್ಕ ಭರಿಸುವುದು.

**ವಾರ್ಷಿಕ ಶುಲ್ಕ** ರೂ.-21,962/-

9) ನಿಗದಿತ ಸಂಯೋಜನಾ ಅರ್ಜಿ ನಮೂನೆ ಶುಲ್ಕ ರೂ.-2,197/-

ಪ್ರಿ-ಕ್ವಾಲಿಫಿಕೇಶನ್ ಅರ್ಜಿ ನಮೂನೆ ಶುಲ್ಕ ರೂ.-3,660/-

ಸದರಿ ಅರ್ಜಿಯನ್ನು ವೈಬಸೈಟ್ ವಿಳಾಸ www.kud.ac.in ಮೂಲಕ ಪಡೆಯುವುದು.

10) **ಶುಲ್ಕದ ಹಣ ಹಿಂತಿರುಗಿಸುವ ಕುರಿತು :**

ನಿಗದಿತ ಶುಲ್ಕದೊಂದಿಗೆ ಸಂಯೋಜನಾ ಅರ್ಜಿಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ನಂತರ ಮತ್ತು ವಿಶ್ವವಿದ್ಯಾಲಯದ ತನಿಖಾ ಸಮಿತಿ ರಚನೆಯಾಗುವ ಪೂರ್ವದಲ್ಲಿ (ಒಂದು ತಿಂಗಳ ಮುಂಚಿತ) ಸಂಯೋಜನಾ ಶುಲ್ಕ ಮರಳ ಪಡೆಯಲಿಚ್ಛಿಸಿದರೆ ಶುಲ್ಕದ ಪ್ರತಿಶತ 75% ರಷ್ಟು ಹಣವನ್ನು ಮಾತ್ರ ಹಿಂತಿರುಗಿಸಲಾಗುವುದು. ಒಂದುವೇಳೆ ತನಿಖಾ ಸಮಿತಿಯು ಕಾರ್ಯ ಪ್ರವೃತ್ತವಾದ ನಂತರ ಶುಲ್ಕದ ಹಣ ಮರಳಿ ನೀಡಲಾಗುವುದಿಲ್ಲ. ಒಂದು ಸಲ ಪಾವತಿ ಮಾಡಿದ ಹಣವನ್ನು ಮುಂದಿನ ವರ್ಷಕ್ಕೆ ವರ್ಗಾಯಿಸಲು ಬರುವುದಿಲ್ಲ.

11) ಸರ್ಕಾರಿ ಆದೇಶ ನಂ. ಇಡಿ/240/ಯು.ಆರ್.ಸಿ/2000 ದಿನಾಂಕ : 14-12-2004 ರ ಮೇರೆಗೆ ಸರ್ಕಾರಿ ಮಹಾವಿದ್ಯಾಲಯಗಳ ಸಂಯೋಜನೆಗೆ ಸರ್ಕಾರಿ ಮಹಾವಿದ್ಯಾಲಯಗಳಲ್ಲಿನ ನೂತನ ಕೋರ್ಸಗಳಿಗೆ/ ವಿಷಯಕ್ಕೆ/ಭಾಷಗೆ/ವಿಧ್ಯಾರ್ಥಿ ಪ್ರಮಾಣದ ಹೆಚ್ಚಳ ಹಾಗೂ ಮುಂದುವರಿಕೆ/ವಿಸ್ತರಣೆ ಮತ್ತು ಶಾಶ್ವತ ಸಂಯೋಜನೆಗೆ ವಿಶ್ವವಿದ್ಯಾಲಯಕ್ಕೆ ಸಂದಾಯ ಮಾಡಬೇಕಾದ ಅರ್ಜಿ ಶುಲ್ಕ ಹಾಗೂ ಸಂಯೋಜನಾ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ. ಅರ್ಜಿಗಳನ್ನು ನಿಗದಿತ ಅವಧಿಯೊಳಗೆ ಸಲ್ಲಿಸದಿದ್ದಲ್ಲಿ ದಂಡದ ಶುಲ್ಕ ಆಕರಿಸಲಾಗುವುದು.

12) ಶಿಕ್ಷಣ/ ದೈಹಿಕ ಶಿಕ್ಷಣ ಮಹಾವಿದ್ಯಾಲಯಗಳಿಗೆ, ಒಂದು ವೇಳೆ NCTE New Delhi ಯಿಂದ ಮಾನ್ಯತೆ ಹಿಂತೆಗೆದುಕೊಂಡಲ್ಲಿ ಸದರಿ ಮಹಾವಿದ್ಯಾಲಯಗಳು ಯಾವುದೇ ಶೈಕ್ಷಣಿಕ ಮುಂತಾದ ಚಟುವಟಿಕೆಗಳನ್ನು ಮಾಡುವಂತಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡಲ್ಲಿ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು.

**ವಿಶೇಷ ಸೂಚನೆ**

**03 ಪ್ರತಿಗಳಲ್ಲಿ ಅರ್ಜಿಗಳನ್ನು ಸರಿಯಾದ ಮಾಹಿತಿ ಹಾಗೂ ದಾಖಲೆ ಪತ್ರಗಳೊಂದಿಗೆ ಬೈಂಡಿಂಗ್ ಮಾಡಿಸಿ ಅರ್ಜಿ ಸಲ್ಲಿಸುವುದು. ನಿಗದಿತ ಅರ್ಜಿ ಹಾಗೂ ಶುಲ್ಕ ತುಂಬದೇ ಇರುವ, ಸರಿಯಾಗಿ ಮಾಹಿತಿ ಒದಗಿಸದೆ ಇರುವ ಅರ್ಜಿಯನ್ನು ತಿರಸ್ಕರಿಸಲಾಗುವುದು. (ಬೈಂಡಿಂಗ್ ಮಾಡಿದ ಅರ್ಜಿಗಳನ್ನು ಮಾತ್ರ ಸ್ವೀಕರಿಸಲಾಗುವುದು)**

## ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಪ್ರಾರಂಭಿಸುವ ಸ್ನಾತಕೋತ್ತರ ಕೋರ್ಸಗಳ ಸಂಯೋಜನಾ ಶುಲ್ಕಗಳ ಮಾಹಿತಿ (ಪಿ.ಜಿ. ಕೋರ್ಸಗಳು)

ಸ್ನಾತಕೋತ್ತರ ಕೋರ್ಸಗಳನ್ನು ಪ್ರಾರಂಭಿಸಲು ಕ.ವಿ.ವಿ ಯಲ್ಲಿ ಶಾಶ್ವತ ಸಂಯೋಜನೆ ಹೊಂದಿರುವ ಅಥವಾ ಐದು ವರ್ಷಗಳ ಸತತ ಮುಂದುವರಿಕೆ ಸಂಯೋಜನೆ ಹೊಂದಿದ ಮಹಾವಿದ್ಯಾಲಯದವರು ಹಾಗೂ ನ್ಯಾಕ್ ಮಾನ್ಯತೆ ಪಡೆದ ಮಹಾವಿದ್ಯಾಲಯಗಳು ಅರ್ಹರಿರುತ್ತವೆ. ಸದರ ಷರತ್ತನ್ನು ಸ್ನಾತಕೋತ್ತರ ಕೋರ್ಸಗಳಾದ ಎಂ.ಬಿ.ಎ, ಎಂ.ಸಿ.ಎ, ಎಂ.ಪಿ.ಎಡ್, ಎಂ.ಎಡ್ ಕೋರ್ಸಗಳ ಅಂದರೆ ಸ್ಟ್ಯಾಚೂಟರಿ ಸಂಸ್ಥೆಗಳಾದ AICTE ಹಾಗೂ NCTE ಯಿಂದ ಮಾನ್ಯತೆ ಪಡೆಯುವ ಕೋರ್ಸಗಳಿಗೆ ಅನ್ವಯಿಸುವದಿಲ್ಲ.

**ಹೊಸ ಸಂಯೋಜನೆ (ಸ್ನಾತಕೋತ್ತರ ಕೋರ್ಸ):**

ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಕೋರ್ಸ ಪ್ರಾರಂಭಿಸಲು ಪ್ರಿ-ಕ್ವಾಲಿಫಿಕೇಶನ್ ಅರ್ಜಿ ಸಲ್ಲಿಸಬೇಕಾಗುವದು. ಸದರ ಅರ್ಜಿ ನಮೂನೆಗಳನ್ನು ಕ.ವಿ.ವಿ ವೆಬ್‌ಸೈಟ/ ಸಿಡಿಸಿ ವೆಬ್‌ಸೈಟ ದಿಂದ ಪಡೆದು ಅದಕ್ಕೆ ಸಂಬಂಧಿಸಿದ ಅರ್ಜಿ ಶುಲ್ಕ ರೂ. 3,660/- ಹಾಗೂ ಈ ಕೆಳಗೆ ಕಾಣಿಸಿದಂತೆ ಸಂಬಂಧಪಟ್ಟ ಸ್ನಾತಕೋತ್ತರ ಕೋರ್ಸಗಳ ತನಿಖಾ ಶುಲ್ಕವನ್ನು ಆನ್‌ಲೈನ್ ಮೂಲಕ ಭರಿಸುವುದು. ನಂತರ ಭರ್ತಿ ಮಾಡಿದ ಪ್ರಿ-ಕ್ವಾಲಿಫಿಕೇಶನ್ ಅರ್ಜಿಯ 03 ಪ್ರತಿಗಳನ್ನು ಸಂಬಂಧಿತ ದಾಖಲಾತಿಗಳೊಂದಿಗೆ ಹಾಗೂ ಶುಲ್ಕ ಭರಿಸಿದ ರಶೀದಿಯನ್ನು ಲಗತ್ತಿಸಿ ನಿಗದಿತ ದಿನಾಂಕದೊಳಗೆ ಕಚೇರಿಗೆ ಸಲ್ಲಿಸುವುದು. ಅರ್ಜಿಯಲ್ಲಿ ತಿಳಿಸಿದ ಸ್ನಾತಕೋತ್ತರ ವಿಷಯ (ವಿಭಾಗ ಪ್ರಾರಂಭಿಸಲು) ಇರುವ ಸೌಲಭ್ಯಗಳ ಬಗ್ಗೆ ತನಿಖೆ ಮಾಡಲು ಪ್ರಿ-ಕ್ವಾಲಿಫಿಕೇಶನ್ ತನಿಖಾ ಸಮಿತಿ ಕಳಿಸಲಾಗುವದು. ಈ ಸಮಿತಿಯು ಸದರ ಕೋರ್ಸ ಪ್ರಾರಂಭಿಸಲು ಶಿಫಾರಸ್ಸು ಮಾಡಿದಲ್ಲಿ ಮಾತ್ರ ರೆಗ್ಯೂಲರ್ ಸಂಯೋಜನೆ ಅರ್ಜಿ ಸಲ್ಲಿಸಲು ತಿಳಿಸಲಾಗುವದು. ಈ ಅರ್ಜಿ ನಮೂನೆಯನ್ನು ರೂ. 2,197/- ಹಾಗೂ ಈ ಕೆಳಗೆ ಕಾಣಿಸಿದಂತೆ ಸಂಬಂಧಪಟ್ಟ ಸ್ನಾತಕೋತ್ತರ ಕೋರ್ಸಗಳ ಹೊಸ ಸಂಯೋಜನಾ ಶುಲ್ಕವನ್ನು ಆನ್‌ಲೈನ್ ಮೂಲಕ ಫೀ ಭರಿಸಿ ರಶೀದಿಯನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸುವುದು. (ಸ್ನಾತಕೋತ್ತರ ವಿಷಯವನ್ನು ಒಂದು ವಿಭಾಗ ಎಂದು ತಿಳಿಯುವದು) ಉದಾ: ಎಂ.ಎ(ಕನ್ನಡ) ವಿಷಯವನ್ನು ಎಂ.ಎ. (ಕನ್ನಡ) ವಿಭಾಗವೆಂದು ತಿಳಿಯಬೇಕು).

**ಪ್ರಿ-ಕ್ವಾಲಿಫಿಕೇಶನ್/ ಹೊಸ ಸಂಯೋಜನಾ ಶುಲ್ಕ :**

| ಕೋರ್ಸಗಳ ವಿವರ | ಪ್ರಿ-ಕ್ವಾಲಿಫಿಕೇಶನ್ ತನಿಖಾ ಶುಲ್ಕ | ಹೊಸ ಸಂಯೋಜನೆ ಶುಲ್ಕ ಪ್ರಿ-ಕ್ವಾಲಿಫಿಕೇಶನದಲ್ಲಿ ಶಿಫಾರಸ್ಸು ಮಾಡಿದರೆ ಮಾತ್ರ |
|---|---|---|
| ಎಂ.ಎ | ರೂ. 58,564/- | ರೂ. 1,17,128/- |
| ಎಂ. ಕಾಂ./ಎಂ.ಆಯ್.ಎಂ./ಇ-ಕಾಮರ್ಸ | ರೂ. 73,205/- | ರೂ. 1,46,410/- |
| ಎಂ.ಎಸ್ಸಿ | ರೂ. 58,564/- | ರೂ. 87,846/- |
| ಎಂ.ಸಿ.ಎ/ಪಿಜಿಡಿಸಿಎ | ರೂ. 55,363/- | ರೂ. 73,205/- |
| ಎಂ.ಬಿ.ಎ/ಎಂ.ಎಸ್.ಇ/ಪಿ.ಜಿ.ಡಿ.ಬಿ.ಎಂ/ | ರೂ. 73,205/- | ರೂ. 1,46,410/- |
| ಎಂ.ಎಡ್ | ರೂ. 73,205/- | ರೂ. 1,46,410/- |
| ಎಂ.ಪಿ.ಎಡ್ | ರೂ. 55,636/- | ರೂ. 73,205/- |
| ಎಂ.ಎಸ್.ಡಬ್ಲೂ/ಎಂ.ಟಿ.ಟಿ.ಎಂ./ಎಂ.ವ್ಹಿ.ಎ./ಎಂ.ಮ್ಯೂಜಿಕ್ | ರೂ. 55,636/- | ರೂ. 73,205/- |
| P. G Diploma in Yoga studies | ರೂ. 50,578/- | ರೂ. 73,205/- |
| ಎರಡು ವರ್ಷದ ಮಾಸ್ಟರ ಆಫ್ ಫೈನಾನ್ಸಿಯಲ್ ಮ್ಯಾನೇಜಮೆಂಟ ಸೆಮಿಸ್ಟರ್ ಕೋರ್ಸ ಸಿ.ಬಿ.ಸಿ.ಎಸ್ ಅಡಿಯಲ್ಲಿ | ರೂ. 50,578/- | ರೂ. 73,205/- |
| ಒಂದು ವರ್ಷದ ಮಾಸ್ ಕಮ್ಯುನಿಕೇಶನ್ & ಜರ್ನಲಿಸಂ (ಪಿ.ಜಿ.ಡಿ.ಎಂ.ಸಿ.ಜೆ) ಸ್ನಾತಕೋತ್ತರ ಕೋರ್ಸ (ಎರಡು ಸೆಮಿಸ್ಟರ್) | ರೂ. 50,578/- | ರೂ. 73,205/- |
| ಪಿ.ಜಿ ಡಿಪ್ಲೊಮಾ ಇನ್ ಬಯೋ-ಸ್ಟ್ಯಾಟಿಸ್ಟಿಕ್ಸ | ರೂ. 50,578/- | ರೂ. 73,205/- |

**ಸ್ನಾತಕೋತ್ತರ ಮುಂದುವರಿಕೆ ಮತ್ತು ವಿಸ್ತರಣೆ ಸಂಯೋಜನಾ ಶುಲ್ಕ :**

| ಕೋರ್ಸಗಳ ವಿವರ | ಮುಂದುವರಿಕೆ | ವಿಸ್ತರಣಾ ಮುಂದುವರಿಕೆ |
|---|---|---|
| ಎಂ.ಎ | ರೂ. 21,962/- | ರೂ. 58,564/- |
| ಎಂ. ಕಾಂ./ಎಂ.ಆಯ್.ಎಂ./ಇ-ಕಾಮರ್ಸ | ರೂ. 73,205/- | ರೂ. 73,205/- |
| ಎಂ.ಎಸ್ಸಿ | ರೂ. 29,282/- | ರೂ. 58,564/- |
| ಎಂ.ಸಿ.ಎ/ಪಿಜಿಡಿಸಿಎ | ರೂ. 18,302/- | ರೂ. 44,656/- |
| ಎಂ.ಬಿ.ಎ/ಎಂ.ಎಸ್.ಇ | ರೂ. 73,205/- | ರೂ. 73,205/- |
| ಎಂ.ಎಡ್ | ರೂ. 73,205/- | ರೂ. 73,205/- |
| ಎಂ.ಪಿ.ಎಡ್ | ರೂ. 17,715 | ರೂ. 44,656/- |
| ಎಂ.ಎಸ್.ಡಬ್ಲ್ಯೂ/ಎಂ.ಟಿ.ಟಿ.ಎಂ./ಎಂ.ವ್ಹಿ.ಎ./ ಎಂ.ಮ್ಯೂಜಿಕ್/ ಪಿ.ಜಿ ಡಿಪ್ಲೊಮಾ ಇನ್ ಯೋಗಾ ಸ್ಟಡೀಜ್ | ರೂ. 18,301/- | ರೂ. 44,656/- |

3) **ಮುಂದುವರಿಕೆ / ವಿಸ್ತರಣೆಗಾಗಿ ಅರ್ಜಿ ಸಲ್ಲಿಸುವ ಕುರಿತು:**

ಸ್ನಾತಕೋತ್ತರ ಕೋರ್ಸ(ವಿಷಯ) ವಿಭಾಗಕ್ಕೆ ಸಂಯೋಜನೆ ಪಡೆದು ಪ್ರಾರಂಭಿಸಿದ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಸದರ ಸ್ನಾತಕೋತ್ತರ ಕೋರ್ಸನ್ನು ಮುಂದುವರೆಸಲು ಮತ್ತು ಎರಡನೇಯ ವರ್ಷಕ್ಕೆ ವಿಸ್ತರಣೆ ಮಾಡಲು ಪ್ರತ್ಯೇಕವಾಗಿ ನಿಗದಿತ ಅರ್ಜಿ ನಮೂನೆಯ ಮೂರು ಪ್ರತಿಗಳನ್ನು ಸಂಬಂಧಿಸಿದ ದಾಖಲೆ ಮತ್ತು ಕ.ವಿ.ವಿ ವೆಬ್‌ಸೈಟಗೆ ಆನ್‌ಲೈನ್ ಮೂಲಕ ಶುಲ್ಕದ ಹಣ ಪಾವತಿ ಮಾಡಿ ರಶೀದಿಯನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸುವುದು. ವಿದ್ಯಾರ್ಥಿಗಳ ಪ್ರವೇಶ ಹೆಚ್ಚಿಸಲು ಸರಕಾರದ ಅನುಮತಿ ಅವಶ್ಯವಿದ್ದು ಪ್ರತ್ಯೇಕ ಅರ್ಜಿಯ ಜೊತೆಗೆ ಮನವಿ ಸಲ್ಲಿಸುವುದು. ತನಿಖಾ ಸಮಿತಿ ಶಿಫಾರಸ್ಸು ಮಾಡಿದ್ದಲ್ಲಿ ಮನವಿಯನ್ನು ಸರಕಾರಕ್ಕೆ ಕಳುಹಿಸಿ ಅನುಮತಿ ಪಡೆದ ನಂತರ ಪರಿಗಣಿಸಲಾಗುವುದು.

4) **ಸ್ನಾತಕೋತ್ತರ ಕೋರ್ಸಗಳ ಠೇವಣಿ ಹಣ:**

ಸ್ನಾತಕೋತ್ತರ ಕೋರ್ಸ/ವಿಷಯಗಳನ್ನು ಪ್ರಾರಂಭಿಸಲು ಕರ್ನಾಟಕ ಸರಕಾರ ಶಿಫಾರಸ್ಸು ಮಾಡಿದಲ್ಲಿ ಕೆಳಗೆ ತಿಳಿಸಿದ ಹಣವನ್ನು ಠೇವಣಿ ಹಣ ಎಂದು ಇಡಬೇಕಾಗುವದು. ಈ ಠೇವಣಿ ಹಣವನ್ನು ವಿಶ್ವವಿದ್ಯಾಲಯದ ನಿಯಮಾನುಸಾರ ಪಾವತಿ ಮಾಡಿದ ನಂತರ ಕೋರ್ಸ (ವಿಷಯ) ಪ್ರಾರಂಭಿಸಲು ಅಧಿಸೂಚನೆ ಹೊರಡಿಸಲಾಗುವುದು.

5) **ವಾರ್ಷಿಕ ಶುಲ್ಕ :**

ಸ್ನಾತಕೋತ್ತರ ಕೋರ್ಸ (ವಿಷಯ) ಗಳಿಗೆ ಸಂಯೋಜನೆ ಹೊಂದಿದ ಮಹಾವಿದ್ಯಾಲಯಗಳಲ್ಲಿ ಪ್ರತಿಯೊಂದು ವಿಷಯಗಳಿಗೆ ತಿಳಿಸಿದ ವಾರ್ಷಿಕ ಶುಲ್ಕವನ್ನು ಪ್ರತಿ ವರ್ಷವೂ ಭರಿಸಬೇಕು.

1) ಸ್ನಾತಕೋತ್ತರ ಕೋರ್ಸ ಪ್ರತಿಯೊಂದು ವಿಷಯಕ್ಕೆ ಇರುವ ವಾರ್ಷಿಕ ಶುಲ್ಕ ಈ ಕೆಳಗಿನಂತೆ.

| ಕೋರ್ಸಗಳ ವಿವರ | ವಾರ್ಷಿಕ ಶುಲ್ಕ | ಠೇವಣಿ ಶುಲ್ಕ |
|---|---|---|
| ಎಂ.ಎ | ರೂ. 29,282/- | ರೂ. 8,78,460/- (ಎರಡು ಕಂತುಗಳಲ್ಲಿ) |
| ಎಂ. ಕಾಂ./ಎಂ.ಆಯ್.ಎಂ./ಇ-ಕಾಮರ್ಸ | ರೂ. 43,923/- | ರೂ. 8,78,460/- (ಎರಡು ಕಂತುಗಳಲ್ಲಿ) |
| ಎಂ.ಎಸ್ಸಿ | ರೂ. 29,282/- | ರೂ. 8,78,460/- (ಎರಡು ಕಂತುಗಳಲ್ಲಿ) |
| ಎಂ.ಸಿ.ಎ/ಪಿಜಿಡಿಸಿಎ | ರೂ. 29,282/- | ರೂ. 8,78,460/- (ಎರಡು ಕಂತುಗಳಲ್ಲಿ) |
| ಎಂ.ಬಿ.ಎ/ಎಂ.ಎಸ್.ಇ | ರೂ. 43,923/- | ರೂ. 8,78,460/- (ಎರಡು ಕಂತುಗಳಲ್ಲಿ) |
| ಎಂ.ಎಡ್ | ರೂ. 43,923/- | ರೂ. 8,78,460/- (ಎರಡು ಕಂತುಗಳಲ್ಲಿ) |
| ಎಂ.ಪಿ.ಎಡ್ | ರೂ. 29,282/- | ರೂ. 8,78,460/- (ಎರಡು ಕಂತುಗಳಲ್ಲಿ) |
| ಎಂ.ಎಸ್.ಡಬ್ಲ್ಯೂ/ಎಂ.ಟಿ.ಟಿ.ಎಂ./ಎಂ.ವ್ಹಿ.ಎ. /ಎಂ.ಮ್ಯೂಜಿಕ್ | ರೂ. 29,282/- | ರೂ. 7,32,050/- (ಎರಡು ಕಂತುಗಳಲ್ಲಿ) |
| ಪಿ.ಜಿ.ಡಿ.ಬಿ.ಎಂ | ರೂ. 29,282/- | ರೂ. 5,85,640/- (ಎರಡು ಕಂತುಗಳಲ್ಲಿ) |
| P. G Diploma in Yoga studies | ರೂ. 29,282/- | ರೂ. 5,85,640/- (ಎರಡು ಕಂತುಗಳಲ್ಲಿ) |
| ಎರಡು ವರ್ಷದ ಮಾಸ್ಟರ ಆಫ್ ಫೈನಾನ್ಸಿಯಲ್ ಮ್ಯಾನೇಜಮೆಂಟ ಸೆಮಿಸ್ಟರ್ ಕೋರ್ಸ ಸಿ.ಬಿ.ಸಿ.ಎಸ್ ಅಡಿಯಲ್ಲಿ | ರೂ. 29,282/- | ರೂ. 8,78,460/- (ಎರಡು ಕಂತುಗಳಲ್ಲಿ) |
| ಒಂದು ವರ್ಷದ ಮಾಸ್ ಕಮ್ಯುನಿಕೇಶನ್ & ಜರ್ನಲಿಸಂ (ಪಿ.ಜಿ.ಡಿ.ಎಂ.ಸಿ.ಜೆ) ಸ್ನಾತಕೋತ್ತರ ಕೋರ್ಸ (ಎರಡು ಸೆಮಿಸ್ಟರ್) | ರೂ. 29,282/- | ರೂ. 8,78,460/- (ಎರಡು ಕಂತುಗಳಲ್ಲಿ) |
| ಪಿ.ಜಿ ಡಿಪ್ಲೊಮಾ ಇನ್ ಬಯೋ-ಸ್ಟ[illegible] | ರೂ. 29,282/[illegible] | [illegible] |

**ಇತರೆ ಶುಲ್ಕಗಳು :**

| | ಪ್ರಿ-ಕ್ವಾಲಿಫಿಕೇಶನ್ ಅರ್ಜಿ ಶುಲ್ಕ | ರೆಗ್ಯುರಲ್ ಅರ್ಜಿ ಶುಲ್ಕ ** | ಸ್ಥಳ ಬದಲಾವಣೆ ಶುಲ್ಕ | ಹೆಸರು ಬದಲಾವಣೆ ಶುಲ್ಕ | ಕಾಲೇಜಿನ ಆಡಳಿತ ಮಂಡಳಿ ಬದಲಾವಣೆ ಶುಲ್ಕ | ವಿ.ಪ್ರ ಮಿತಿ ಹೆಚ್ಚಳ ಶುಲ್ಕ | ಎರಡನೇಯ ಬಾರಿ ತನಿಖಾ ಶುಲ್ಕ |
|---|---|---|---|---|---|---|---|
| ಎಂ.ಎ/ ಎಂ.ಎಸ್ಸಿ/ ಎಂ.ಪಿ.ಎಡ್/ ಎಂ.ಎಸ್.ಡಬ್ಲ್ಯೂ/ ಎಂ.ಟಿ.ಟಿ.ಎಂ/ ಎಂ.ವ್ಹಿ.ಎ./ ಎಂ.ಮ್ಯೂಜಿಕ್ | ರೂ. 3,660/- | ರೂ.2,197/- | ರೂ. 36,602/- | ರೂ. 21,962/- | ರೂ. 43,923/- + 43,923/- | ರೂ. 7,320/- ಪ್ರತಿ ವಿದ್ಯಾರ್ಥಿಗೆ | ರೂ. 29,282/- |
| ಎಂ. ಕಾಂ./ ಎಂಆಯ್.ಎಂ/ ಇ-ಕಾಮರ್ಸ/ ಎಂ.ಎಡ್ | ರೂ. 3,660/- | ರೂ.2,197/- | ರೂ. 36,602/- | ರೂ. 21,962/- | ರೂ. 43,923/- + 43,923/- | ರೂ. 7,320/- ಪ್ರತಿ ವಿದ್ಯಾರ್ಥಿಗೆ | ರೂ. 29,282/- |
| ಎಂ.ಸಿ.ಎ/ ಪಿಜಿಡಿಸಿಎ/ ಎಂ.ಬಿ.ಎ/ ಎಂ.ಎಸ್.ಇ/ ಪಿ.ಜಿ.ಡಿ.ಬಿ.ಎಂ/ ಪಿ.ಜಿ.ಡಿ.ಎಂ.ಸಿ.ಜೆ./ ಪಿ.ಜಿ.ಡಿಪ್ಲೋಮಾ ಇನ್ ಯೋಗಾ ಸ್ಟಡೀಸ್ | ರೂ. 3,660/- | ರೂ.2,197/- | ರೂ. 36,602/- | ರೂ. 21,962/- | ರೂ. 43,923/- + 43,923/- | ರೂ. 14,641/- ಪ್ರತಿ ವಿದ್ಯಾರ್ಥಿಗೆ | ರೂ. 29,282/- |

** ಟಿಪ್ಪಣಿ: ಸ್ಥಳ ಬದಲಾವಣೆ/ ಹೆಸರು ಬದಲಾವಣೆ/ ಕಾಲೇಜಿನ ಆಡಳಿತ ಮಂಡಳಿ ಬದಲಾವಣೆ/ ವಿದ್ಯಾರ್ಥಿ ಪ್ರಮಾಣ ಹೆಚ್ಚಳಕ್ಕಾಗಿ ನಿಗದಿತ ಶುಲ್ಕಗಳೊಂದಿಗೆ ರೆಗ್ಯೂಲರ್ ಅರ್ಜಿ ಶುಲ್ಕವನ್ನು ಭರಿಸುವುದು.

**ಕುಲಸಚಿವರು**